ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ, ಉಡುಪಿ.

ಸಿ.ಸಿ.:55/2021

ಸಿ.ಡಬ್ಲ್ಯು. 3 ಪಿ.ಡಬ್ಲೂ : 2

| | |
|---|---|
| ಸಾಕ್ಷಿದಾರರ ಹೆಸರು | ಸುಹೇಲ್ ಸಿಕಂದರ್ ಖಾನ್ |
| ತಂದೆಯ ಹೆಸರು | ಸಿಕಂದರ್ ಅಹಮ್ಮದ್ ಖಾನ್ |
| ವಯಸ್ಸು | 33 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಾಸಸ್ಥಳ | ಸುಭಾಷ್ ನಗರ |

ದಿನಾಂಕಃ 23-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ಗಾಂಧಿ ಆಸ್ಪತ್ರೆಯ ಬಳಿ ನಾನು ಮೊಬೈಲ್ ಟೆಕ್ನಿಷನ್ ಆಗಿ ಕೆಲಸ ಮಾಡುತ್ತಿದ್ದೆನು. ಚಾಸಾ 1ರವರು ನನ್ನ ಸಂಬಂದಿ ಆಗಿದ್ದು ಅವರು ಈಗ ತೀರಿಕೊಂಡಿರುತ್ತಾರೆ. ಸಾಕ್ಷಿಯವರು 1 ದಾಖಲೆಯನ್ನು ನೋಡಿ ಅವುಗಳಲ್ಲಿ ತಮ್ಮ ಸಹಿ ಇದೆ ಎಂದು ಗುರುತಿಸಿದ್ದು ಸದರಿ ದಾಖಲೆಯು ದೂರು ಆಗಿದ್ದು ಅದನ್ನು ನಿಪಿ 2 ಎಂದು ಸಾಕ್ಷಿಯವರ ಸಹಿಯನ್ನು ನಿಪಿ. 2ಎ ಎಂದು ಗುರುತಿಸಲಾಯಿತು. ನಿಪಿ 2 ರಲ್ಲಿರುವ ಕೈ ಬರಹವು ನನ್ನದಾಗಿದೆ ಸಾಕ್ಷಿಯವರು ಮುಂದುವರಿದ ನಿಪಿ 2ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಹಾಜರಿಯಲ್ಲಿ ಪೊಲೀಸಿನವರು ಚಾಸಾ 1ರವರನ್ನು ವಿಚಾರಣೆ ಮಾಡಿರುವುದಿಲ್ಲ. ಚಾಸಾ 1ರವರು ಯಾವುದೇ ಘಟನೆಯ ಬಗ್ಗೆ ನನಗೆ ತಿಳಿಸಿರುವುದಿಲ್ಲ.

ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿ ಕೂಲ ಸಾಕ್ಷಿ ಎಂದು ತಿಳಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ ಅನುಮತಿಯನ್ನು ನೀಡಲಾಯಿತು.

**ಪಾಟೀ ಸವಾಲುಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿಃ 06-07-2021 ರಂದು ಹಿರಿಯಡ್ಕದಲ್ಲಿ ಒಂದು ದನವನ್ನು ಚಾಸಾ 6 ರವರಿಂದ ಖರೀದಿ ಮಾಡಿ ಕೆಎ 07 5094 ಪಿಕಪ್ ವಾಹನದಲ್ಲಿ ತೆಗೆದುಕೊಂಡು ಬರುತ್ತಿದ್ದೆನೆಂದು ಚಾಸಾ 1 ರವರು ನಿಮಗೆ ತಿಳಿಸಿದರು ಎಂದರೆ ಸರಿಯಲ್ಲ. ಆ ವಾಹನವನ್ನು ಚಾಸಾ 2 ರವರು ಚಾಲನೆ ಮಾಡುತ್ತಿದ್ದರು ಎಂದು ಚಾಸಾ 1 ರವರು ಹೇಳಿದರು ಎಂದರೆ ಸರಿಯಲ್ಲ. ರಾಂಪುರ ಬಳಿ ಬರುತ್ತಿದ್ದಾಗ ಇಟಿಯಾಸ್ ಕಾರಿನಲ್ಲಿ ಆರೋಪಿತರು ನಮ್ಮನ್ನು ಹಿಂಬಾಲಿಸಿಕೊಂಡು ಬಂದು ನಮ್ಮ ವಾಹನವನ್ನು ಅಡ್ಡಗಟ್ಟಿ ನಿಲ್ಲಿಸಿದರೆಂದು ಚಾಸಾ 1 ರವರು ತಿಳಿಸಿದರು ಎಂದರೆ ಸರಿಯಲ್ಲ. ಹಸುವನ್ನು ಕಳ್ಳತನ ಮಾಡಿ ತೆಗೆದುಕೊಂಡು ಹೋಗುತ್ತಿದ್ದೀರಿ ಎಂದು ನನಗೆ ಆರೋಪಿತರು ಕೈಯಿಂದ ಹಲ್ಲೆ ಮಾಡಿದರು ಎಂದು ಚಾಸಾ 1 ರವರು ತಿಳಿಸಿದರು ಎಂದರೆ ಸರಿಯಲ್ಲ. ಆರೋಪಿತರು ಪಿಕಪ್ ವಾಹನವನ್ನು ಜಖಂ ಮಾಡಿ ನಷ್ಟ ಮಾಡಿದರು ಎಂದು ಚಾಸಾ 1 ರವರು ತಿಳಿಸಿದರು ಎಂದರೆ ಸರಿಯಲ್ಲ. ಆರೋಪಿತರು ನನ್ನನ್ನು ಅವರ ಕಾರಿನಲ್ಲಿಯೇ ಅಪಹರಿಸಿಕೊಂಡು ಹೋಗಿ ಜೀವ ಬೆದರಿಕೆ ಹಾಕಿರೆಂದು ಚಾಸಾ 1 ರವರು ತಿಳಿಸಿದರು ಎಂದರೆ ಸರಿಯಲ್ಲ. ಈ ವಿಚಾರವಾಗಿ ದೂರು ಬರೆದುಕೊಂಡುವಂತೆ ಚಾಸಾ 1 ರವರು ನಿಮ್ಮನ್ನು ಮನವಿ ಮಾಡಿದ್ದು ಅವರ ಮನವಿಯಂತೆ ನೀವು ನಿಪಿ 2 ರಂತೆ ದೂರನ್ನು ನಿಮ್ಮ ಕೈಬರಹದಲ್ಲಿಯೇ ಬರೆದುಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ಈ ಬಗ್ಗೆ 07-07-2021 ರಂದು ಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ಹೇಳಿಕೆಯನ್ನು ಸಾಕ್ಷಿಯವರಿಗೆ ಓದಿ ಹೇಳಿದ್ದು ನಿರಾಕರಿಸಿರುತ್ತಾರೆ. ಹೇಳಿಕೆಯನ್ನು ನಿಪಿ 3 ಎಂದು ಗುರುತಿಸಲಾಯಿತು.

ನಿಪಿ 2ರಲ್ಲಿ ಕಾಣುವ ಸಹಿಯು ಚಾಸಾ 1ರವರ ಸಹಿ ಎಂದರೆ ಅದನ್ನು ಗುರುತಿಸಲು ಆಗುವುದಿಲ್ಲ ಎಂದು ನುಡಿದಿರುತ್ತಾರೆ. ಆರೋಪಿಯವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಯವರ ಪರ ಶ್ರೀ ಪಿ. ಎಂ ಪಿ ವಕೀಲರಿಂದಃ**

ಪಾಟೀ ಸವಾಲು ಇಲ್ಲವೆಂದು ಮನವಿ ಮಾಡಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎಸಿಜೆಎಂ ಉಡುಪಿ.